ಶ್ರೀ ಕೆ. ಎಚ್. ಶ್ರೀನಿವಾಸ. — ಡಿಮ್ಯಾಂಡ್ ಚಾರ್ಜಸನ್ನು ರದ್ದು ಮಾಡಬೇಕೆಂದು ಮೊದಲೇ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಆದರೆ ಆಷ್ಪರಲ್ಲಿ ಟ್ಯಾರಿಫ್ ಕಮಿಟಿ ಶಿಫಾರಸು ಬಂದಿದ್ದರಿಂದ ಅದನ್ನು ವಿದ್ಯುಚ್ಛಕ್ತಿ ಮಂಡಲಿಯವರು ಕಾರ್ಯಗತ ಮಾಡುವುದಕ್ಕಾಗಲಿಲ್ಲ. ಮಾನ್ಯ ಆರ್ಥ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಇದನ್ನು ರದ್ದು ಮಾಡಲಾಗುವುದೆಂದು ಸ್ಪಷ್ಟಪಡಿಸಿದ್ದಾರೆ. ೧-೧-೧೯೭೮ ರಿಂದ ವಸೂಲು ಮಾಡಿದ್ದರೆ ಅದನ್ನು ಮುಂದಿನ ಬಿಲ್ ಹಣದಲ್ಲಿ ಹೊಂದಾಣಿಕೆ ಮಾಡಲಾಗುತ್ತದೆ.

ಇನ್ನು ಅಡಿಷನಲ್ ಡಿಪಾಜಿಟ್ಸ್ ಬಗ್ಗೆ ಹೇಳಬೇಕೆಂದರೆ, ಬಳಕೆದಾರರು ಸಕಾಲದಲ್ಲಿ ಬಿಲ್ ಹಣ ಕಟ್ಟದಿದ್ದರೆ, ೨ ತಿಂಗಳ ಮುಂಚೆ ಕರೆಂಟನ್ನು ಡಿಸ್-ಕನೆಕ್ಟ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಎರಡು ತಿಂಗಳ ಭದ್ರತೆಗೋಸ್ಕರವಾಗಿ ಈ ಒಂದು ಡಿಪಾಜಿಟನ್ನು ತೆಗೆದುಕೊಳ್ಳುತ್ತೇವೆ. ಮತ್ತು ಯಾರಾದರು ವಿದ್ಯುಚ್ಛಕ್ತಿ ಉಪಯೋಗ ಮಾಡುವುದು ಜಾಸ್ತಿಯಾದಾಗ ಮತ್ತು ಟ್ಯಾರಿಫ್ ರಿವಿಜನ್ ಆದಾಗ ಮೊದಲು ತೆಗೆದುಕೊಂಡಿರತಕ್ಕಂಥ ಡಿಪಾಜಿಟ್ ಸಾಲದೇ ಬೋದಾಗ ಅಡಿಷನಲ್ ಡಿಪಾಜಿಟ್ ತೆಗೆದುಕೊಳ್ಳುತ್ತೇವೆ. ಇದನ್ನು ಕೈಬಿಡುವುದು ಸಾಧ್ಯವಿಲ್ಲ.

ಅಧ್ಯಕ್ಷರು — ಮಾನ್ಯ ಸದಸ್ಯರ ಸಲಹೆಯನ್ನು ಮಾನ್ಯ ಮಂತ್ರಿಗಳು ಬಂದನಂತರ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಲಕ್ಷ್ಮಣ. — ಈ ಸಭೆಯು ಘನತೆ ಉಳಿಯಬೇಕಾದರೆ ಸಂಬಂಧಪಟ್ಟ ಮಂತ್ರಿಗಳು ಕಾಲಕ್ಕೆ ಸರಿಯಾಗಿ ಸಭೆಯಲ್ಲಿ ಇರಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ. — ಇದನ್ನು ನಾವು ಪದೇ ಪದೇ ಹೇಳುವುದು ಸರಿಯಲ್ಲ ಎರಡೂ ಮನೆಗಳು ಒಂದೇ ಸಲ ಸಭೆ ಸೇರಿದಾಗ ಮಂತ್ರಿಗಳು ಅಲ್ಲಿದ್ದಾರೆಂದು ಹೇಳಿದರೆ ಒಪ್ಪಬಹುದು. ಆದರೆ ಆ ಸಭೆ ಇನ್ನೂ ಸೇರಿಲ್ಲ. ಆದಕಾರಣ ಮಾನ್ಯ ಮಂತ್ರಿಗಳು ಸಭೆಗೆ ಸಕಾಲದಲ್ಲಿ ಬರಬೇಕು. ಮಾನ್ಯ ಸದಸ್ಯರು ಮೊದಲೆ ಬರುವಂತೆ ಮಾನ್ಯ ಮಂತ್ರಿಗಳು ಸಹ ಬರಬೇಕು. ಮಾನ್ಯ ವಿದ್ಯಾಮಂತ್ರಿಗಳು ಈಗತಾನೆ ಬಂದರು. ತಾವು ಈ ಬಗ್ಗೆ ಏನಾದರು ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು. — ಮಂತ್ರಿಗಳು ಸಕಾಲಕ್ಕೆ ಬರಲೇಬೇಕು.

ಶ್ರೀ ಪಿ. ರಾಮಪ್ಪ. — ಮಂತ್ರಿಗಳು ಸಭೆಗೆ ಸಕಾಲದಲ್ಲಿ ಬರುವುದಿಲ್ಲ ಎನ್ನುವ ಸುದ್ದಿಯನ್ನು ನಾವು ಇಲ್ಲಿಯವರೆಗೆ ಪತ್ರಿಕೆಗಳಲ್ಲಿ ನೋಡುತ್ತಿದ್ದೆವು. ಈಗ ಸಭೆಯಲ್ಲಿಯೇ ನೋಡುತ್ತಿದ್ದೇವೆ.

ಅಧ್ಯಕ್ಷರು. — ಕರ್ತವ್ಯ ದೃಷ್ಟಿಯಿಂದ ಮಂತ್ರಿಗಳು ಸಕಾಲಕ್ಕೆ ಬರಬೇಕು. ಈಗ ಮಾನ್ಯ ಪುಟ್ಟಸ್ವಾಮಿಯವರು ೩೦ನೇ ನಿಯಮದ ಮೇರೆಗೆ ಚರ್ಚೆ ಪ್ರಾರಂಭ ಮಾಡಬಹುದು.

ಶ್ರೀ ಕೆ. ಪುಟ್ಟಸ್ವಾಮಿ. — ಸ್ವಾಮಿ,.....

ಅಧ್ಯಕ್ಷರು. — ಇದರಲ್ಲಿ ಪೋಲೀಸ್ ವಿಷಯ ಸಹ ಇವೆ. ಆದ್ದರಿಂದ ತಾವು ಮುಖ್ಯಮಂತ್ರಿಗಳು ಬಂದಮೇಲೆ ಚರ್ಚೆ ಪ್ರಾರಂಭ ಮಾಡಿದರೆ ಒಳ್ಳೆಯದು. ಅಲ್ಲಿಯವರೆಗೆ ಇದನ್ನು ತಡೆಹಿಡಿಯಲಾಗಿದೆ. ಶ್ರೀ ಪ್ರಭಾಕರ್‌ರವರೇ ತಾವು ಕಾಲಕೆ ಸರಿಯಾಗಿ ಬರಬೇಕು. ಸ್ವಲ್ಪ ಬೆಳಿಗ್ಗೆ ಬೇಗನೆ ಎದ್ದರೆ ಎಲ್ಲಾ ಸರಿ ಹೋಗುತ್ತದೆ.

(ii) re: Scarcity of drinking water in Kandali Village, Hassan Taluk.

SRI K.H. HANUMEGOWDA (Hassan). — I call the attention of the Hon'ble Minister for Rural Development and Panchayatraj to the hardship caused to the villagers of Kandali village in Hassan Taluk, to the scarcity of drinking water.

SRI K. PRABHAKAR (Minister for Rural Development and Panchayatraj). — I wish to make the following Statmeent:—

"The Deputy Commissioner, Hassan District, Hassan, has intimated that the Water Supply Scheme in Kandali

Village of Hassan Taluk, is not functioning for the last one month as the pump has gone out of order. It is stated that repairs to the pump is being carried out through a Private Agency and that this work would be completed in about a week. The people of Kandali are at present getting drinking water from two open draw wells where there is water."

"The Deputy Commissioner, Hassan, has also stated that there is no scarcity of drinking water in the village at present and every precautionary measure is being taken to avert the possibility of scarcity of drinking water in the village. The Deputy Commissioner, Hassan, has already issued suitable instructions to the Block Development Officer, Hassan. and the Executive Engineer, P.H.E. Division, Hassan, in this behalf."

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ, ಕಂಡ್ಲಿ ವಿಲೇಜ್‌ನಲ್ಲಿ ಸುಮಾರು ೨೫೦ ಕುಟುಂಬಗಳು ಇವೆ. ಎರಡು ಬಾವಿಗಳಿರುವುದು ಏನೇನು ಸಾಲದು ಅಲ್ಲಿ ಸ್ವಲ್ಪ ಸ್ವಲ್ಪ ನೀರು ಸಿಗುತ್ತಿರುವುದರಿಂದ ಬಹಳ ತೊಂದರೆಯಾಗಿದೆ. ಅಲ್ಲಿ ೫ ವರ್ಷಗಳ ಹಿಂದೆ ಬೋರ್‌ವೆಲ್ ಹಾಕಿದ್ದು, ಅದು ಹಾಕಿದಾಗಿನಿಂದಲೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದರಿಂದ ಅಲ್ಲಿಯ ಜನರು ಸುಮಾರು ಅರ್ಧ ಮೈಲಿ, ಒಂದು ಮೈಲಿವರೆಗೆ ಕುಡಿಯುವ ನೀರನ್ನು ತರುವುದಕ್ಕೆ ಹೋಗಬೇಕಾಗಿದೆ. ಇದರಿಂದಾಗಿ ಅಲ್ಲಿಯ ಜನರು ಬಹಳ ತೊಂದರೆಗೊಳಗಾಗಿದ್ದಾರೆ. ಹೀಗಾಗುವುದಕ್ಕೆ ಕಾರಣವೇನು ? ಇದು ೪ ವರ್ಷಗಳಿಂದಲೂ ನಡೆದು ಕೊಂಡು ಬಂದಿರತಕ್ಕ ರೀತಿ ಇದು ಇದಕ್ಕೆ ಕಾರಣವೇನು ಎಂಬುದನ್ನು ತಿಳಿಸಬೇಕು.

ಶ್ರೀ ಕೆ. ಪ್ರಭಾಕರ್.—ಬೋರ್ ವೆಲ್‌ನಲ್ಲಿ ಹಾಕಿರುವ ಪಂಪ್ ಒಂದು ತರಹದ ಯಂತ್ರ ಎನ್ನುವುದು ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ, ಪದೇ ಪದೇ ಕೆಟ್ಟು ಹೋಗಲಿಕ್ಕೆ ಏನಾದರೂ ಕಾರಣವಿರಬೇಕು ಅದನ್ನು ಕಂಡು ಹಿಡಿದು, ಅದು ಕೆಟ್ಟು ಹೋಗದ ಹಾಗೆ ರಿಪೇರಿ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ತಿಳಿಸುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಇದೇ ರೀತಿ ಕಳೆದ ವರ್ಷ ತೊಂದರೆಯಾದಾಗ, ಅಲ್ಲಿಗೆ ರಿಪೇರಿಗೆ ಹೋಗುವಾಗ ಇಂಜಿನಿಯರ್‌ರವರು ನನ್ನನ್ನು ಕರೆದು ಕೊಂಡು ಹೋಗಿದ್ದರು ಆಗ ಅದನ್ನು ರಿಪೇರಿ ಮಾಡಲು ಬಂದಿದ್ದ ಕೆಲಸಗಾರರು ಹೇಳಿದರು, ಬೋರ್‌ನ್ನು ಸರಿಯಾಗಿ ನೇರವಾಗಿ ಹಾಕದೇ ಇರುವುದರಿಂದ ಮಿಷನ್ ಸರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ ನಾವು ಇದೇ ರೀತಿ ರಿಪೇರಿ ಮಾಡಿ ಬಿಟ್ಟು ಹೋದರೆ ಪುನಃ ಮಿಷನ್ ಕೆಟ್ಟು ಹೋಗುತ್ತದೆಂದು ಹೇಳಿದರು. ಇದನ್ನು ಸಂಬಂಧಪಟ್ಟ ಇಂಜಿನಿಯರ್‌ರವರ ಗಮನಕ್ಕೂ ತರಲಾಗಿದೆ. ಆದುದರಿಂದ ದಯಮಾಡಿ ಅಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಬೋರ್ ಮಾಡಿಸಿ ಆದಷ್ಟು ಜಾಗ್ರತೆ ಅದನ್ನು ಸರಿಪಡಿಸುವುದಕ್ಕೆ ವ್ಯವಸ್ಥೆ ಮಾಡಿಸುತ್ತೀರಾ ಸ್ವಾಮಿ ?

ಶ್ರೀ ಕೆ. ಪ್ರಭಾಕರ್.—ಪದೇ ಪದೇ ಯಂತ್ರ ಕೆಟ್ಟು ಹೋಗುತ್ತಿರುವುದರಿಂದ ಅಲ್ಲಿಯ ಜನಗಳಿಗೆ ಬಹಳ ತೊಂದರೆಯಾಗುತ್ತಿದೆಂದು ಮಾನ್ಯ ಸದಸ್ಯರು ಏನು ಒಂದು ನೋವಿನಿಂದ ಹೇಳುತ್ತಿದ್ದಾರೆ ಅದು ನಮಗೂ ಪೀಡ್ಯವಾಗುತ್ತಿದೆ. ಆ ರೀತಿ ಆಗದೇನೇ ಖಾಯಂ ಆಗಿ ತೊಂದರೆ ತಪ್ಪಿಸಿ ಜನಗಳಿಗೆ ಅನುಕೂಲವಾಗುವ ರೀತಿಯಲ್ಲಿ ಏನು ಮಾಡಬೇಕೋ ಅದನ್ನು ಮಾಡಿಸಿಕೊಡುತ್ತೇವೆ. ಇನ್ನು ಮುಂದೆ ಜನಗಳಿಗೆ ತೊಂದರೆ ಬರದ ಹಾಗೆ ಮಾಡಿಸುತ್ತೇವೆ ಇದರ ಬಗ್ಗೆ ಡೆಪ್ಯುಟಿ ಕಮಿಷನರ್‌ರವರಿಗೆ ವಿಚಿತವಾಗಿ ತಿಳಿಸಿ ಅನುಕೂಲ ಮಾಡಿಕೊಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ, ಅಲ್ಲಿ ೩ ಇಂಚ್ ಸರಿಯಾಗಿ ಬೋರ್ ಮಾಡದೇ ಇರುವುದರಿಂದ ಅಲ್ಲಿ ರಿಪೇರಿ ಮಾಡಿಸಿದಾಗ್ಯೂ ಕೂಡ ಅದು ಪದೇ ಪದೇ ಕೆಡುತ್ತಿರುವುದಕ್ಕೆ ಕಾರಣ. ಅಲ್ಲಿ ತಾವು ಈಗ ಪುನಃ ರಿಪೇರಿ ಮಾಡಿಸಿದರೆ ಅದು ೮-೧೦ ದಿವಸಗಳಲ್ಲಿಯೇ ಕೆಟ್ಟು ಹೋಗಿ ನೀರು

ಬರುವುದು ನಿಂತು ಬಿಡುತ್ತದೆ. ಅದಕ್ಕೋಸ್ಕರ ನಾನು ಕೇಳುತ್ತಿರುವುದು ಪುನಃ ಬೇರೆ ಬೋರ್ ಮಾಡಿಸುತ್ತೀರಾ ಇಲ್ಲ ಬೇರೆ ಬೋರ್ ವೆಲ್ ಹಾಕಿಸಿ ಕೊಡುತ್ತೀರಾ ಎಂದು ? ಹಾಗೆ ಮಾಡಿಸಿ ಕೊಡುವ ಹಾಗಿದ್ದರೆ ಎಷ್ಟು ದಿವಸದಲ್ಲಿ ಮಾಡಿಸಿಕೊಡುತ್ತೀರಿ ?

ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರು ಹೇಳಿದ್ದನ್ನೇ ಹೇಳುತ್ತಿದ್ದಾರೆ. ಆದರೂ ಕೂಡ, ಅವರ ನೋವು ಏನಿದೆ ಅದನ್ನು ಗ್ರಹಿಸಿ ನಾನು ಹೇಳುತ್ತಿದ್ದೇನೆ. ಅಲ್ಲಿ ಬೋರ್ ಬದಲಾಯಿಸಬೇಕಾಗಿದ್ದರೆ, ಆಥವಾ ಮಿಷನ್ ಬದಲಾಯಿಸಬೇಕೆಂದಿದ್ದರೆ ಆ ರೀತಿ ಬದಲಾಯಿಸಿ ಮುಂದೆ ತೊಂದರೆ ಇಲ್ಲದ ಹಾಗೆ ಮಾಡಿ ಕೊಡುತ್ತೇವೆ ಎನ್ನುವ ಭರವಸೆ ಕೊಡುತ್ತಿದ್ದೇನೆ. ಎಷ್ಟು ದಿವಸದಲ್ಲಿ ಎನ್ನುವುದನ್ನು ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ. ಆದಷ್ಟು ಬೇಗ ಎಂದು ಸಾಮಾನ್ಯವಾಗಿ ಹೇಳುವ ಉತ್ತರ. ಇದರಲ್ಲಿ ಮಾನ್ಯ ಸದಸ್ಯರ ನೋವು ವ್ಯಕ್ತಪಡಿಸುತ್ತಿರುವುದರಿಂದ ಇದನ್ನು ಆದಷ್ಟು ಬೇಗ ಮಾಡಿಸಿ ಕೊಡುತ್ತೇನೆ, ಆದಷ್ಟು ಬೇಗ ಎಂದರೆ ೩ ದಿವಸ, ೫ ದಿವಸ ಇಲ್ಲ ೧ ತಿಂಗಳು ಆಗಬಹುದು. ಇದು ಬೋರ್ ಹಾಕುವುದು ಎಂದರೆ ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ. ಒಂದು ವೇಳೆ ಆಪರೇಷನ್ ಆದ ಮೇಲೆ ಕಾಯಿಲೆ ಎಷ್ಟು ದಿವಸದಲ್ಲಿ ವಾಸಿಯಾಗುತ್ತದೆಂದು ಖಚಿತವಾಗಿ ಹೇಗೆ ಹೇಳುವುದಕೆ ಸಾಧ್ಯವಿಲ್ಲವೊ ಹಾಗೆ ಇದು. ಆದುದರಿಂದ ಆದಷ್ಟು ಬೇಗ ಎಂದರೆ ೧ ತಿಂಗಳಲ್ಲಿಯೇ ಮಾಡಿಸಿ ಕೊಡುತ್ತೇನೆ.

ಶ್ರೀ ಕೆ. ಎಚ್. ಹನುಮೆಗೌಡ.—ಸ್ವಾಮಿ, ಅಲ್ಲಿ ಇನ್ನೊಂದು ಏನೆಂದರೆ ಬೋರ್‌ವೆಲ್‌ಗಳ ರೀಪೇರಿ ಕೆಲಸವನ್ನು ಪ್ರೈವೇಟ್‌ನವರಿಂದ ಮಾಡಿಸದೇನೇ ತಮ್ಮ ಇಲಾಖೆಯವರಿಂದಲೇ ಮಾಡಿಸಬೇಕು ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಅದಕ್ಕೋಸ್ಕರ ನಾನು ತಮ್ಮ ಇಲಾಖೆಯವರಿಂದಲೇ ಆದಷ್ಟು ಬೇಗ ರಿಪೇರಿ ಮಾಡಿಸಿಕೊಡುತ್ತೀರಾ ಎಂದು ಕೇಳುತ್ತಿರುವುದು.

ಶ್ರೀ ಕೆ.ಪ್ರಭಾಕರ್.—ನಾನೇ ಖುದ್ದು ಬಂದು ನೋಡಿ ಆಫೀಸರ ಜೊತೆಯಲ್ಲಿ ಮಾತನಾಡಿ ನಮ್ಮ ಇಲಾಖೆಯವರ ಕೈಯಲ್ಲಿಯೇ ಮಾಡಿಸಿ ಕೊಡುತ್ತೇನೆ.

ಒಬ್ಬ ಸದಸ್ಯರು.—ಸ್ವಾಮಿ, ಇದು ಕೇವಲ ಹಾಸನ ಜಿಲ್ಲೆಯ ಒಂದು ತಾಲ್ಲೂಕಿನಲ್ಲಿ ಆಗಿರುವಂಥಾದ್ದು ಅಲ್ಲ ಎಲ್ಲಾ ಕಡೆಯೂ ಅಂದರೆ ಸುಮಾರು ೧೦ ಸಾವಿರ ಬೋರ್‌ವೆಲ್‌ಸ್‌ಲ್ಲಿಯೂ ಇದೇ ರೀತಿಯ ಪ್ರಾಬ್ಲಂಗಳು ಇವೆ. ಆದುದರಿಂದ ತಾವು ಇದರ ಬಗ್ಗೆ ಒಂದು ಖಚಿತವಾಗಿ ವ್ಯವಸ್ಥೆ ಮಾಡಬೇಕು. ಈಗ ತಮಿಳು ನಾಡಿನಲ್ಲಿ ಆದಕೋಸ್ಕರವಾಗಿಯೇ ಮೇನ್‌ಟೇನೆನ್ಸ್ ಸೆಲ್ ಎಂದು ಮಾಡಿದ್ದಾರೆ ಆ ರೀತಿ ಮಾಡಿದರೆ ಅವರು ಅವನ್ನೆಲ್ಲಾ ಸುವ್ಯವಸ್ಥಿತ ರೀತಿಯ ನೋಡಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಒಂದು ಬೋರ್‌ವೆಲ್‌ನ್ನು ಒಂದು ತಿಂಗಳಲ್ಲಿ ರಿಪೇರಿ ಮಾಡಿಸಿಕೊಡುತ್ತೇವೆಂದರೆ ಅದು ಒಪ್ಪತಕ್ಕದ್ದು ಅಲ್ಲಸ್ವಾಮಿ.

ಶ್ರೀ ಕೆ. ಪ್ರಭಾಕರ್.—ಅದು ಸರ್ಕಾರದವರ ಗಮನಕ್ಕೆ ಬಂದಿದೆ. ಅದನ್ನು ರಿಪೇರಿ ಮಾಡುವುದಕ್ಕಾಗಿ ಒಂದು ಸುವ್ಯವಸ್ಥಿತವಾದ ಸೆಲ್‌ನ್ನು ಬೇರೆಯೇ ಮಾಡಬೇಕೆಂದು ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಮಾಡಿ ಅದಕ್ಕಾಗಿ ಸಾಕಷ್ಟು ಹಣವನ್ನು ತೆಗೆದಿಟ್ಟು ವ್ಯವಸ್ಥೆ ಮಾಡಿದ್ದೇವೆ. ೧೯೪೯-೧೯೭೮ ರಿಂದ ಆಜೆಗೆ ಆ ಕೆಲಸಗಳನ್ನು ತೆಗೆದುಕೊಂಡು ಮಾಡಬೇಕೆಂದಿರುವುದರಿಂದ ಇನ್ನು ಮುಂದೆ ಇಂಥಾ ತೊಂದರೆಗಳು ಇರುವುದಿಲ್ಲ. ಇಂಥಾ ಪ್ರಶ್ನೆಗಳು ಸಹ ಇನ್ನು ಮುಂದೆ ಉದ್ಭವವಾಗುವುದಿಲ್ಲವೆಂದು ತಿಳಿದುಕೊಂಡಿದ್ದೇನೆ.

ಒಬ್ಬ ಸದಸ್ಯರು.—ಈಗಾಗಲೇ ಮಾನ್ಯ ಸ್ನೇಹಿತರು ಬೋರ್‌ವೆಲ್ ವಿಚಾರ ಹೇಳಿದರು, ನಾನು ಒಂದೇ ಒಂದು ಪಾಯಿಂಟ್‌ನ್ನು ಮಾನ್ಯ ಮಂತ್ರಿಗಳವರಲ್ಲಿ ಕೇಳುಯಸುತ್ತೇನೆ. ಸ್ವಾಮಿ, ಈ ಮಿಷನರಿ ಕೆಟ್ಟು ಹೋದರೆ ರಿಪೇರಿ ಮಾಡಬೇಕು ಎಂದರೆ ಬಹಳ ತೊಂದರೆಯಾಗುತ್ತದೆ ಇದಕ್ಕೆ ಕಾರಣ ವೇನೆಂದರೆ ಒಂದೊಂದು ಮಿಷನ್ ಒಂದೊಂದು ತರಹದ್ದು ಇರುತ್ತವೆ. ಆದಕ್ಕೆ ಬೇಕಾದ ಸಾಮಾನುಗಳು ಸಿಗದೇ ಇರುವುದರಿಂದ ಈ ತೊಂದರೆ ಉಂಟಾಗಿದೆ. ಆದುದರಿಂದ ಯಾವ ಯಾವ ಮಿಷನ್‌ಗಳಿಗೆ ಯಾವ ಯಾವ ಸಾಮಾನುಗಳು ಬೇಕಾಗುತ್ತವೆ ಎನ್ನುವ ಬಗ್ಗೆ ಒಂದು ಸ್ಟ್ಯಾಂಡರ್ಡನವರು ಇಟ್ಟು ಕೊಂಡಿರಬೇಕು. ಆವರು ಕೂಡಲೇ ಅಲ್ಲಿಗೆ ಹೋಗಿ ರಿಪೇರಿ ಮಾಡಿದರೆ ಆಗ ನೀರಿನ ತೊಂದರೆ ಇರುವುದಿಲ್ಲ. ಆದುದರಿಂದ ಇದನ್ನು ಶೀಘ್ರಗತಿಯಲ್ಲಿ ಮಾನ್ಯ ಮಂತ್ರಿಗಳವರು ಮಾಡಿಸುತ್ತಾರೆಂದು ಆಶಿಸುತ್ತೇನೆ.

೧-೩೦ ಪಿ. ಎಂ.

SRI G. B. SHANKAR RAO.—This is a problem which affects the entire rural population. When I asked the Deputy Commissioner, he said that there was no funds to spend for that purpose. I have also received letter from him stating that there was no funds. The Department of Public Health Engineering spares mechanics for the repair of the equipments. But the difficulty is about the funds. So, the Government should take up this matter very seriously and see that sufficient funds are placed at the disposal of the Deputy Commissioners of each District to provide drinking water to the rural population.

SRI K. PRABHAKAR.—Arrangements have already been made to place sufficient funds at the disposal of the Deputy Commissioners. ನಾನು ಹೇಳುವುದು ಈಪತ್ತಿನವರೆಗೂ ಸಂಬಂಧಪಟ್ಟಂಥ ಮಾತಾಗಿರುತ್ತದೆ. ನಾಳೆಯಿಂದ ಈ ಕೊರತೆ ಇರುವುದಿಲ್ಲ. ಅದನ್ನು ನಾನು ಪರ್ಮನೆಂಟ್ ಆಗಿ ಮಾಡಿಸಿಕೊಡಲು ಪ್ರಯತ್ನ ಮಾಡುತ್ತೇನೆ. ಈ ಪಿ.ಎಚ್.ಇ. ಮತ್ತು ತಾಲ್ಲೂಕು ಮಟ್ಟದಲ್ಲಿ ಬಿ.ಡಿ.ಪಿ. ಅವರ ಕಂಟ್ರೋಲ್‌ನಲ್ಲಿ ಕೆಲಸ ಮಾಡತಕ್ಕ ಮೆಕ್ಯಾನಿಕ್ ಏನು ಇದ್ದಾರೆ ಅವರಿಗೆ ಕೊಡಬೇಕಾಗಿರತಕ್ಕಂಥ ಸಂಬಳಸಾರಿಗೆ ಎಲ್ಲವನ್ನು ಕೊಟ್ಟು ಆ ಮಿಷನರಿಗಳಿಗೆ ಬೇಕಾದ ಸ್ಪೇರ್ ಪಾರ್ಟ್ಸ್‌ಗಳನ್ನು ತರಿಸಲು ಎಷ್ಟು ದುಡ್ಡು ಬೇಕಾಗಿರುತ್ತದೋ ಅಷ್ಟು ದುಡ್ಡನ್ನು ಕೊಡಲು ವ್ಯವಸ್ಥೆಯನ್ನು ಮಾಡಿ ಸುಲಲಿತವಾಗಿ ಆಯಾಯಾ ಏರಿಯಾದಲ್ಲಿ ಕೆಲಸ ಕಾರ್ಯಗಳು ನಡೆಯುವುದಕ್ಕೆ ವಿವರಿಸಿ ಮಾಡುತ್ತೇನೆ. ಈಗ ಎರಡು ಜಿಲ್ಲೆಗಳಲ್ಲಿ ಯೂನಿಟ್‌ಗಳೆಂದು ವ್ಯವಸ್ಥೆ ಮಾಡಿದ್ದೇವೆ. ಮೊದಲು ಈ ರೀತಿಯಾವ ಯೂನಿಟ್ಟುಗಳು ಇರಲಿಲ್ಲ. ಮಾನ್ಯ ಸದಸ್ಯರು ಪ್ರಶ್ನೆಯಾಗಿ ತೊಂದರೆ ಇರುವುದನ್ನು ಸರ್ಕಾರದ ಗಮನಕ್ಕೆ ತಂದರೆ ಅದನ್ನು ನಿವಾರಣೆ ಮಾಡುವ ವ್ಯವಸ್ಥೆಯನ್ನು ನೂಡುತ್ತೇನೆ ಡಿ.ಪಿ.ಯವರ ಹತ್ತಿರ ಹಣವಿರುವುದಿಲ್ಲ. ಕೊರತೆ ಇರುತ್ತದೆಂದು ತಿಳಿಸಿರುವಿರಿ ಅವರ ಹತ್ತಿರ ದುಡ್ಡಿರಲಿಲ್ಲವೆನ್ನುವ ಬಗ್ಗೆ ದೃಢವಾದ ನಂಬಿಕೆ ಇರುತ್ತದೆ. ಈ ರೀತಿ ಈಪತ್ತಿನವರೆಗೂ ಕೊರತೆ ಇತ್ತು. ಇದನ್ನು ನನ್ನ ಗಮನಕ್ಕೆ ತಂದಿರುತ್ತೀರಿ. ಈ ಕೊರತೆಯು ನಿವಾರಣೆಗೆ ಸೂಕ್ತ ಪರಿಹಾರವನ್ನು ಮಾಡುತ್ತೇನೆ.

Matters Under Rule 312

(*i*) *re : Sealing of the office room of Prof. Venkatagiri Gowda of Bangalore University.*

† SRI K. PUTTASWAMY (Chamaraja).—Sir, I am raising a point under Rule 312. This relates to the conduct of Bangalore City Police in locking the office of Prof. Venkatagiri Gowda of Bangalore University. I have come to know that the office room of Prof. Venkatagiri Gowda both in Jnanabharathi and also the post-graduate centre at Central College are locked for the purpose of conducting a search in the office. Sir, I am aware that we cannot question the conduct of the Police. If the circumstances necessitate locking up rooms for the purpose of search or breaking open the lock for the purpose of search. That arises only on the basis of the complaint

Asterisks indicate that remarkes or speeches have not been revised by the member concerned.